ಗುರುತತ್ತ್ವ

# ಆಧ್ಯಾತ್ಮಿಕ ಜೀವನದಲ್ಲಿ ಗುರುವಿನ ಪಾತ್ರ

ಸ್ವಾಮಿ ಹರ್ಷಾನಂದ

### ಗುರುವಿನ ಗುಲಾಮನಾಗದ ತನಕ...

**ತ**ಮಾಷೆಯ ಕಥೆಯೊಂದುಂಟು: ಒಬ್ಬ ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡನಂತೆ. ಹಿಂತಿರುಗಿ ಬಂದನಂತರ ಅವನ ಮಿತ್ರನೆಂದನಂತೆ, "ನೋಡು! ಕಳ್ಳತನ ಮಾಡುವ ಮುಂಚೆ ಸಿಕ್ಕಿಹಾಕಿಕೊಳ್ಳದ ರೀತಿಯಲ್ಲಿ ಕಳ್ಳತನ ಮಾಡುವ ಕಲೆಯನ್ನು, ಚೋರಶಿಖಾಮಣಿಯೊಬ್ಬನಿಂದ ಕಲಿಯಬೇಕು!" ಹೀಗೆ ಕಳ್ಳತನದಂತಹ ಕೆಟ್ಟಕೆಲಸಕ್ಕೂ ಗುರುವಿನ ಮಾರ್ಗದರ್ಶನ ಬೇಕೆಂದಾದರೆ ಅಪರಿಚಿತ ಶ್ರೇಯೋಮಾರ್ಗವಾದ ಮೋಕ್ಷಪಥದಲ್ಲಿ ನಡೆಯಲು ಸದ್ಗುರುವಿನ ಆಶ್ರಯ ಮಾರ್ಗದರ್ಶನಗಳ ಆವಶ್ಯಕತೆ ಮತ್ತೆಷ್ಟಿರಬಹುದು?

ಶ್ರೀರಾಮಕೃಷ್ಣ ಪರಮಹಂಸರು ಇದೇ ವಿಷಯವನ್ನು ದೃಷ್ಟಾಂತ ಕಥೆಯೊಂದರ ಮೂಲಕ ಹೀಗೆ ವಿವರಿಸುತ್ತಾರೆ: ಇಬ್ಬರು ರೈತರು ಕೊಲ್ಕತಾ ನಗರವನ್ನು ನೋಡಲೆಂದು ಬರುತ್ತಾರೆ. ಅವರಲ್ಲಿ ಮೊದಲನೆಯವನು ಬಂದಿಳಿದ ಕೂಡಲೇ ತನ್ನ ಮೂಟೆಯನ್ನು ಹೆಗಲಮೇಲೆ ತಾನೇ ಹೊತ್ತುಕೊಂಡು ನಗರಸಂಚಾರವನ್ನು ಪ್ರಾರಂಭಿಸುತ್ತಾನೆ. ಎರಡನೆಯವನಾದರೋ ಧರ್ಮಶಾಲೆಯೊಂದಕ್ಕೆ ಹೋಗಿ ತನ್ನ ಗಂಟುಮೂಟೆಗಳನ್ನು ಅಲ್ಲಿಟ್ಟು ವಿಶ್ರಮಿಸಿದ ನಂತರ ಮಾರ್ಗದರ್ಶಕನೊಬ್ಬನ ಸಹಾಯದಿಂದ ಮುಖ್ಯ ಸ್ಥಳಗಳನ್ನೆಲ್ಲ ಬಹು ಬೇಗ ನೋಡಿ ಹಿಂದಿರುಗುತ್ತಾನೆ. ಆದರೆ, ಮೊದಲನೆಯ ರೈತ ಕೇವಲ ಕೊಳಚೆ ಪ್ರದೇಶಗಳಲ್ಲೇ ಸುತ್ತಿ ಬಂದನಂತೆ! ಹಿಂತಿರುಗಿ ಬಂದಾಗ ಬೇಸರದಿಂದ ಎರಡನೆಯ ರೈತನನ್ನು ಕಂಡು, "ಈ ಕೊಳಚೆನಗರವನ್ನು ನಾನು ನೋಡಲು ಬಂದದ್ದೇ ತಪ್ಪಾಯಿತು!" ಎಂದು ಉದ್ಗಾರ ಮಾಡಿದನಂತೆ.

ಆದುದರಿಂದಲೇ ಶಂಕರಭಗವತ್ಪಾದರೆಂದದ್ದು: ಗುರೋರಂಘ್ರಿ–ಪದ್ಮೇ ಮನಶ್ಚೇನ್ನ ಲಗ್ನೇ ತತಃ ಕಿಮ್ –'ಗುರುವಿನ ಪಾದಕಮಲದಲ್ಲಿ ಮನಸ್ಸನ್ನಿಡದಿದ್ದರೆ ಅದರಿಂದ ಏನು ಸಾಧ್ಯವಾದೀತು?' ಪುರಂದರ ದಾಸರಂತೂ 'ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ' ಎಂದು ಘೋಷಿಸಿದ್ದಾರೆ. ಅದಲ್ಲದೆ, ಶ್ವೇತಾಶ್ವತರ ಉಪನಿಷತ್ತು ತನ್ನ ಕೊನೆಯ ಮಂತ್ರದಲ್ಲಿ ಗುರುಭಕ್ತಿಯ ಮಹಿಮೆಯನ್ನು ಹೀಗೆ ಸಾರುತ್ತದೆ:

> ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ ।
> ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥



ಗುರುಸ್ವರೂಪಿ ದಕ್ಷಿಣಾಮೂರ್ತಿ

"ಭಗವಂತನಲ್ಲಿಡುವ ಅತ್ಯಂತ ಭಕ್ತಿಯಂತೆಯೇ ಗುರುವಿನಲ್ಲಿಯೂ ಭಕ್ತಿಯಿಡುವ ಮಹಾತ್ಮನಿಗೆ ಶಾಸ್ತ್ರಾರ್ಥಗಳು ತಾವಾಗಿಯೇ ಹೊಳೆಯುತ್ತವೆ."[1]

### ಗುರುವು ಹೇಗಿರಬೇಕು?

ಹಾಗಾದರೆ ಅಧ್ಯಾತ್ಮಜೀವನದಲ್ಲಿ ದಾರಿ ತೋರಿಸಬಲ್ಲ ಗುರುವು ಹೇಗಿರಬೇಕು? **'ಗುಶಬ್ದಸ್ತ್ವಂಧಕಾರಸ್ಸ್ಯಾತ್ ರುಶಬ್ದಸ್ತನ್ನಿವರ್ತಕಃ'** ಎನ್ನುತ್ತದೆ ಗುರುಗೀತೆ. ಅರ್ಥಾತ್ ಅಜ್ಞಾನಾಂಧಕಾರವನ್ನು ಹೋಗಲಾಡಿಸಬಲ್ಲವನೇ ನಿಜವಾದ ಗುರು.

ಸದ್ಗುರುವಿನ ಲಕ್ಷಣಗಳನ್ನು ಶಾಸ್ತ್ರಗಳು ಹೀಗೆ ಬಣ್ಣಿಸಿವೆ: **'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಶ್ರೋತ್ರಿಯಂ ಬ್ರಹ್ಮನಿಷ್ಠಮ್'**– 'ಆ ಪರಮಾತ್ಮವಸ್ತುವನ್ನು ಅರಿಯಲೋಸುಗ ಅವನು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಸಾರಬೇಕು.'

ಶ್ರೀಶಂಕರರೂ ಸಹ ತಮ್ಮ ವಿವೇಕಚೂಡಾಮಣಿಯೆಂಬ ಅದ್ಭುತ ಗ್ರಂಥದಲ್ಲಿ ಎಂತಹ ಗುರುವನ್ನು ಶಿಷ್ಯನು ಬಳಿಸಾರಬೇಕೆಂಬುದನ್ನು ಹೀಗೆ ವಿವರಿಸಿರುತ್ತಾರೆ:

> ಶ್ರೋತ್ರಿಯೋಽವೃಜಿನೋಽಕಾಮಹತೋ ಯೋ ಬ್ರಹ್ಮವಿತ್ತಮಃ
> ಬ್ರಹ್ಮಣ್ಯುಪರತಃ ಶಾಂತೋ ನಿರಿಂಧನ ಇವಾನಲಃ
> ಅಹೇತುಕದಯಾಸಿಂಧುರ್ಬಂಧುರಾನಮತಾಂ ಸತಾಮ್ ॥

ಶ್ರೋತ್ರಿಯನೂ ಪಾಪರಹಿತನೂ, ಕಾಮವಿಲ್ಲದವನೂ, ಬ್ರಹ್ಮವಿದರಲ್ಲಿ ಶ್ರೇಷ್ಠನೂ, ಬ್ರಹ್ಮದಲ್ಲಿಯೇ ನೆಲೆಸಿರುವವನೂ, ಕಟ್ಟಿಗೆಯನ್ನೆಲ್ಲ ಸುಟ್ಟು ನಂದಿಹೋಗಿರುವ ಬೆಂಕಿಯಂತೆ ಶಾಂತನೂ, ಯಾವ ಪ್ರತಿಫಲವನ್ನೂ ಬಯಸದೆ ದಯಾಸಾಗರನಾಗಿರುವವನೂ, ನಮಿಸಿದ ಸಜ್ಜನರಿಗೆ ಬಂಧುವೂ ಆದಂತಹ ಗುರುವನ್ನು ಆರಾಧಿಸಬೇಕು.

---

*ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಹರ್ಷಾನಂದಜಿಯವರು ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತಗಳಲ್ಲಿ ಅನೇಕ ಉದ್ಗ್ರಂಥಗಳನ್ನು ರಚಿಸಿದ್ದಾರೆ. ಶಾಸ್ತ್ರಗಳಲ್ಲಿ ಆಳವಾದ ಪಾಂಡಿತ್ಯ ಅವರದು.*

### ಗುರುವಿನ ಬಳಿಸಾರುವುದು ಹೇಗೆ?

ನಿಜವಾಗಿ ನೋಡಿದರೆ ಭಗವಂತನೇ ಆದಿಗುರು. ಗುರು ಪರಂಪರೆಯು ಪ್ರಾರಂಭವಾದದ್ದೇ ಅವನಿಂದ. ಆದುದರಿಂದ ನಮ್ಮ ಗುರುವನ್ನೂ ಭಗವಂತನ ಅಪರರೂಪವೆಂದು ಭಾವಿಸಬೇಕು.

ಗುರುಪರಂಪರೆಯಲ್ಲಿ ನಾವು ಆದರಿಸಬೇಕಾದವರು ನಾಲ್ಕು ಜನ: **ಗುರು, ಪರಮಗುರು, ಪರಾಪರಗುರು ಮತ್ತು ಪರಮೇಷ್ಠಿಗುರು.**

ಒಮ್ಮೆ ಗುರುವನ್ನು ಕಂಡುಕೊಂಡಮೇಲೆ ಆತನನ್ನು ಹೇಗೆ ಬಳಿಸಾರಬೇಕು? ಭಗವದ್ಗೀತೆಯೆನ್ನುತ್ತದೆ: **ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ** – "ಅದನ್ನು ಎಂದರೆ ಬ್ರಹ್ಮಜ್ಞಾನವನ್ನು ಸಾಷ್ಟಾಂಗ ಪ್ರಣಾಮದಿಂದಲೂ ಬಹುವಿಧವಾದ ಪ್ರಶ್ನೆಗಳಿಂದಲೂ ಗುರುಶುಶ್ರೂಷೆಯಿಂದಲೂ ತಿಳಿದುಕೊ."

ವಿವೇಕಚೂಡಾಮಣಿಯಲ್ಲಿ ಶಂಕರ ಭಗವತ್ಪಾದರೆನ್ನುತ್ತಾರೆ:

ತಮಾರಾಧ್ಯ ಗುರುಂ ಭಕ್ತ್ಯಾ ಪ್ರಹ್ವಪ್ರಶ್ರಯಸೇವನೈಃ ।
ಪ್ರಸನ್ನಂ ತಮನುಪ್ರಾಪ್ಯ ಪೃಚ್ಛೇದ್ ಜ್ಞಾತವ್ಯಮಾತ್ಮನಃ ॥

ಅಂಥ ಗುರುವನ್ನು ಭಕ್ತಿಯಿಂದ ಆರಾಧಿಸಿ ನಮ್ರತೆ, ವಿನಯ, ಸೇವೆ –ಇವುಗಳಿಂದ ಪ್ರಸನ್ನನಾದ ಅವನ ಬಳಿಸಾರಿ ತಾನು ತಿಳಿಯ ಬೇಕೆಂದಿರುವುದನ್ನು ಕುರಿತು ಪ್ರಶ್ನಿಸಬೇಕು.[೫]

### ಗುರುವಿನ ಸೇವೆ

ಶಿವನು ಕೋಪಗೊಂಡರೂ ಗುರುವು ಕಾಪಾಡಬಲ್ಲನಂತೆ. ಆದರೆ ಗುರುವು ಕೋಪಗೊಂಡರೆ ಬೇರಾರೂ ರಕ್ಷಿಸಲಾರರಂತೆ![೬] ಆದುದ ರಿಂದ ಗುರುವನ್ನು ಸರಿಯಾಗಿ ಆರಾಧಿಸಬೇಕು.

ಇದನ್ನು ಗುರುಗೀತೆಯು ಸಂಕ್ಷೇಪವಾಗಿ ಹೀಗೆ ವರ್ಣಿಸುತ್ತದೆ: ಗುರುವು ತ್ರಿಮೂರ್ತಿಗಳ ಏಕಸ್ವರೂಪನೆಂಬ ಭಾವನೆಯಿಂದ ಸಾಷ್ಟಾಂಗ ಪ್ರಣಾಮ; ಪಾದಾರ್ಚನೆ, ಪಾದೋದಕಸೇವನೆ; ಗುರುಮೂರ್ತಿಯ ಧ್ಯಾನ; ಗುರುವನ್ನು ಸ್ತುತಿಸುವುದು; ಗುರುವಿಗೆ ಉಪಯುಕ್ತವಾಗುವ ಪ್ರಿಯವಾದ ವಸ್ತುಗಳನ್ನು ಸಮರ್ಪಿಸುವುದು. ಇವುಗಳಲ್ಲದೆ, ಪ್ರತಿ ನಿತ್ಯವೂ ಏಳುವುದಕ್ಕೆ ಮುಂಚೆ ಸಹಸ್ರಾರಚಕ್ರದಲ್ಲಿ ಗುರುವನ್ನು ಧ್ಯಾನಿಸಿ ಮಾನಸಪೂಜೆಯನ್ನೂ ಅರ್ಪಿಸಬೇಕು.[೭]

ಗುರುಸನ್ನಿಧಿಯಲ್ಲಿ ಕೆಳಗಿನವುಗಳನ್ನು ಎಂದಿಗೂ ಮಾಡಬಾರದು: ತಿರಸ್ಕಾರದ ನುಡಿಗಳು, ವಾದಿಸುವುದು, ಕೊಟ್ಟ ಕೆಲಸವನ್ನು ಮಾಡ ದಿರುವುದು, ಅಸಭ್ಯವರ್ತನೆ, ಆಜ್ಞೆಯನ್ನು ಮೀರುವುದು, ಸ್ವಂತಸುಖ ಕ್ಕಾಗಿ ಪ್ರಯತ್ನ, ಗುರುವಿತ್ತ ಪ್ರಸಾದರೂಪವಾದ ವಸ್ತುಗಳನ್ನಲ್ಲದೆ ಇತರ ವಸ್ತುಗಳ ಸೇವನೆ, ಗುರುನಿಂದೆ ಮಾಡುವವರನ್ನು ತಡೆಯ ದಿರುವುದು ಇತ್ಯಾದಿ.

### ಗುರುವಿನ ಕರ್ತವ್ಯ

ಬಳಿಸಾರಿದ ಶಿಷ್ಯನನ್ನು ಪರೀಕ್ಷಿಸಿ ಅವನು ಉಪದೇಶಕ್ಕೆ ಯೋಗ್ಯನೆಂದು ಕಂಡುಬಂದಮೇಲೆ ಗುರುವು ಅವನಿಗೆ ತನ್ನೆಲ್ಲ ವಿದ್ಯೆಯನ್ನೂ ಸ್ವಲ್ಪವೂ ಹಿಂಜರಿಯದೆ ಧಾರೆಯೆರೆಯಬೇಕು. ಇದು ಅವನಿಗೆ ಅನ್ವಯಿಸುವ ನಿಯಮ.

ವೇದಾಂತ ಸಂಪ್ರದಾಯದಲ್ಲಿ ಗುರುವು ಶ್ರವಣ ಮನನ ನಿದಿಧ್ಯಾಸನಗಳ ಮೂಲಕ ಆತ್ಮವಿದ್ಯೆಯನ್ನು ಕಲಿಸಬೇಕು. ತಂತ್ರ ಅಥವಾ ಆಗಮಸಂಪ್ರದಾಯದಲ್ಲಿ ಮಂತ್ರದೀಕ್ಷೆಯು ಮುಖ್ಯ. ಋಷ್ಯಾದಿ ನ್ಯಾಸ, ಕರನ್ಯಾಸ, ಅಂಗನ್ಯಾಸ, ಧ್ಯಾನಶ್ಲೋಕ – ಇವುಗಳ ಕ್ರಮವನ್ನು ಹೇಳಿಕೊಟ್ಟನಂತರ ಇಷ್ಟದೇವತೆಯ ಮಂತ್ರವನ್ನು ಗುರುವು ಶಿಷ್ಯನ ಕಿವಿಯಲ್ಲಿ ಉಚ್ಚರಿಸುತ್ತಾನೆ. ಇದನ್ನು ಶ್ರೋತ್ರದೀಕ್ಷೆ ಎಂದು ಕರೆಯುತ್ತಾರೆ.

ಇದಲ್ಲದೆ ಗುರುವು ಶಿಷ್ಯನಲ್ಲಿ ಅಧ್ಯಾತ್ಮಜಾಗೃತಿಯನ್ನು ಇತರ ವಿಧಾನಗಳ ಮೂಲಕವೂ ಮಾಡಬಹುದು. ಉದಾಹರಣೆಗೆ: **ಚಕ್ಷುರ್ದೀಕ್ಷೆ**(ತನ್ನ ದೃಷ್ಟಿಯನ್ನು ಶಿಷ್ಯನ ದೃಷ್ಟಿಯಲ್ಲಿರಿಸಿ ಶಕ್ತಿಪ್ರದಾನ ಮಾಡುವುದು); **ಸ್ಪರ್ಶದೀಕ್ಷೆ**(ಶಿಷ್ಯನನ್ನು ಮುಟ್ಟಿ ಅಥವಾ ಅವನ ನಾಲಗೆಯ ಮೇಲೆ ಬೆರಳಿನಿಂದ ಮಂತ್ರವನ್ನು ಬರೆದು ಚೈತನ್ಯ ವನ್ನೆಬ್ಬಿಸುವುದು).

### ಉಪಸಂಹಾರ

ಗುರುಗೀತೆಯಲ್ಲಿ ಇನ್ನೂ ಕೆಲವು ಸ್ವಾರಸ್ಯಕರ ವಿಷಯಗಳನ್ನು ತಿಳಿಸಿದೆ. ಜ್ಞಾನಸಂಪಾದನೆಗಾಗಿ ತೀವ್ರವಾದ ಇಚ್ಛೆಯುಳ್ಳ ಶಿಷ್ಯನು, ದುಂಬಿಯು ಜೇನಿಗಾಗಿ ಹಲವು ಹೂವುಗಳನ್ನು ಅರಸಿಹೋಗುವಂತೆ, ಹಲವು ಗುರುಗಳನ್ನಾಶ್ರಯಿಸಬಹುದಂತೆ. ಆದರೆ ಇದು ಸಾಮಾನ್ಯ ಶಾಸ್ತ್ರವಿದ್ಯೆಗೆ ಅನ್ವಯಿಸುವುದೇ ಹೊರತು ಅಧ್ಯಾತ್ಮವಿದ್ಯೆಗಲ್ಲ.

ಗುರುವಿನ ಮಾಹಾತ್ಮ್ಯವನ್ನು ಹಲವು ರೀತಿಯಲ್ಲಿ ಹೊಗಳಿದ್ದರೂ ಗುರುಗೀತೆಯು ಅಯೋಗ್ಯನೆಂದು ಕಂಡುಬಂದ ಗುರುವನ್ನು ತ್ಯಜಿಸ ಬೇಕೆಂದು ಘೋಷಿಸುತ್ತದೆ. ಸುಳ್ಳುಹೇಳುವವನೂ, ಮೋಸ ಮಾಡುವವನೂ, ಜ್ಞಾನಹೀನನೂ, ಶಾಸ್ತ್ರಗಳಿಗೆ ಅಪಾರ್ಥ ಮಾಡಿ ಭ್ರಾಂತಿಯನ್ನುಂಟುಮಾಡುವವನೂ ಆದಂತಹ ಗುರುವನ್ನು ದೂರ ದಿಂದಲೇ ತ್ಯಜಿಸಬೇಕಂತೆ.[೮]

**ಸಂಗ್ರಹವಾಗಿ ಹೇಳಬೇಕೆಂದರೆ, ಆಧ್ಯಾತ್ಮಿಕ ಸಾಧಕನು ಉತ್ತಮ ಗುರುವನ್ನು ಪಡೆದಮೇಲೆ, ಶ್ರದ್ಧಾಭಕ್ತಿಗಳಿಂದ ಅವನ ಸೇವೆಯನ್ನು ಮಾಡಿ ಅವನನ್ನು ತೃಪ್ತಿಪಡಿಸಿದರೆ ಸರ್ವಸ್ವವನ್ನೂ ಪಡೆಯಬಹುದು.**

ಆಕರಗಳು:

೧ ಶ್ವೇತಾಶ್ವತರ ಉಪನಿಷತ್ತು ೬.೨೩
೨. ಮುಂಡಕೋಪನಿಷತ್ ೧.೨.೧೨
೩. ವಿವೇಕಚೂಡಾಮಣಿ, ಶ್ಲೋಕ ೩೩
೪. ಭಗವದ್ಗೀತೆ, ೪:೩೪
೫. ವಿವೇಕಚೂಡಾಮಣಿ, ೩೪
೬. ಗುರುಗೀತಾ, ೭೬
೭. ಅದೇ ೫,೬,೭
೮. ಅದೇ, ಶ್ಲೋಕ ೧೭೪, ೧೭೬